MS – 001

# II Semester B.A./B.H.M. Examination, May 2011
## (Freshers Scheme)
## ಕನ್ನಡ ಭಾಷಾ ಪತ್ರಿಕೆ – 2
## ಸಾಹಿತ್ಯ ಸಮನ್ವಯ– 2 ಮತ್ತು ಬೆಟ್ಟದ ಜೀವ

Time : 3 Hours                                                  Max. Marks : 90

I. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ. (10×1=10)

1) ಡಾ॥ ಚಂದ್ರಶೇಖರ ಕಂಬಾರರ ಎರಡು ಕೃತಿಗಳನ್ನು ಹೆಸರಿಸಿ.
2) ಸುಗ್ಗಿ ಹೇಗೆ ಬರುತಿದೆ ?
3) ಕಡಲುಗಳ್ಳರು ಯಾರು ?
4) ಮಹಮ್ಮದರ ಜೀವ ಉಳಿಸಿದವರು ಯಾರು ?
5) ಹಣದ ಖರ್ಚಿಲ್ಲದೆ, ಶ್ರಮವಿಲ್ಲದೆ ಪಡೆಯಬಹುದಾದ ಸುಖದ ಹೆಸರೇನು ?
6) ಮಾನವ ಗುಡುಗು ಸಿಡಿಲುಗಳನ್ನು ಯಾವುದರ ಲಾಂಛನವೆಂದು ಭಾವಿಸಿದ್ದ ?
7) ವಿಶ್ವಸಂಸ್ಥೆಯ ಮೂರನೇ ವಿಶ್ವಸಮ್ಮೇಳನ ಎಲ್ಲಿ ನಡೆಯಿತು ?
8) ಶಿವರಾಮನ ಊರು ಯಾವುದು ?
9) ಗೋಪಾಲಯ್ಯ ದಂಪತಿಗಳು ಬೇಸರವಾದರೆ ಹೋಗುವ ಜಾಗ ಯಾವುದು ?
10) ಪೇಟೆಯವರಿಗೆ ಕುಮಾರ ಪರ್ವತದಷ್ಟು ದೊಡ್ಡದಾಗಿ ಕಾಣುವುದು ಯಾವುದು ?

II. ಯಾವುದಾದರೂ ಐದಕ್ಕೆ ಟಿಪ್ಪಣಿ ಬರೆಯಿರಿ. (5×2=10)

1) ಇಂಗ್ಲೀಷ್ ಗೀತೆಗಳು
2) ಕೆ. ಪಿ. ಪೂರ್ಣಚಂದ್ರ ತೇಜಸ್ವಿ
3) ಭಾವಗೀತೆ
4) ಶಿಕಾರಿ ಮಂಜಪ್ಪ
5) ಇಂದ್ರ
6) ಡಾರ್ವಿನ್
7) ಪರಮೇಶ್ವರ ಭಟ್ಟರು
8) ಕಾಳಿ.

III. ಯಾವುದಾದರೂ ಒಂದು ಕಾವ್ಯ ಭಾಗದ ವಿಶ್ಲೇಷಣೆ ಮಾಡಿ. (1×6=6)

1) ನಾಡ ಮೂಲೆ ಮೂಲೆಗೆ, ರಾಜ ಬೀದಿ ಸಂದಿಗೆ,
ಕ್ರಾಂತಿ ಭಾನು ಹೊಳೆದು ಹೊಂಬೆಳಕ ಚೆಲ್ವುದೆಂದಿಗೆ ?
ಎಂದಿಗಯ್ಯ ಎಂದಿಗೆ ?
ನನ್ನ ನಾಡ ಮಂದಿಗೆ,
ಕಾವಳವಿದು ಕಳೆದು ಮತ್ತೆ ತಿಳಿವು ಹೊಳೆವ್ವುದೆಂದಿಗೆ
ಹುಟ್ಟಿಗಂಟಿ ಬಂದ ಚಿತ್ತದಾಸ್ಯ ಕಳೆವುದೆಂದಿಗೆ !

P.T.O.

http://www.onlinebu.com



2) ಸಗಣಿ ಮೈಗಂಜಳ ತೊಳೆಯಲಿಕ್ಕೆ, ನಮ್ಮಪ್ಪ ಬೀರಪ್ಪನ ಪಾದ
ಪಡಕೊಳ್ಳಲಿಕ್ಕೆ ಹಡದವ್ವ ಕರ್ರೆವ್ವನ ಕರಿಮೈ ಎರಿಯಲಿಕ್ಕೆ,
ಹೊರಕಡೆಗೆ, ಹೇಲುಚ್ಚೆಗೆ, ಬೋಳಿಯರ ಮಡಿ ಒಡ್ಡೆಗೆ,
ಭಟ್ಟರಾಚಮನಕ್ಕೆ ಅದಕ್ಕೆ ಇದಕ್ಕೆ ಎದಕ್ಕು
ಒಟ್ಟು ಖರ್ಚಾದ ಕೆರೆನೀರು ಬಚ್ಚಲದಿಳಿಜಾರಿನಗುಂಟ ಹರಿದು
ಕರೆಗೆ ಸೇರುವ ದಿನನಿತ್ಯದ ವ್ಯವಹಾರ, ಈ ಕೆರೆಯ ಚಮತ್ಕಾರ.

IV. ಆರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(6×4=24)**

1) ಗೋವುಗಳು ಗೊಲ್ಲನ ಕೊಳಲಿನ ಸಂಗೀತಕ್ಕೆ ಪ್ರತಿಕ್ರಿಯಿಸುವ ಚಿತ್ರದ ವಿವರಣೆ ನೀಡಿ.
2) 'ಕಾಳಗದ ಪದ' ಕವನದ ಭಾವವನ್ನು ಸಂಗ್ರಹಿಸಿ.
3) 'ಎಂದಿಗೆ' ಕವನದಲ್ಲಿ ಕವಿಗೆ ತನ್ನ ನಾಡ ಮಂದಿಯ ಸ್ಥಿತಿ ಏನಾಗಬೇಕು ಎಂಬ ಆಶಯವಿದೆ ?
4) 'ಅಳಿಲ ಸೇವೆ' ಯ ನಾಣ್ಣುಡಿಯ ಹಿಂದೆ ಇರುವ ಕಥೆ ಯಾವುದು ?
5) 'ಏಕಾಂತ ಸುಖ' ದಲ್ಲಿ ಪ್ರಬಂಧಕಾರ್ತಿ ಇಂಗ್ಲೀಷಿನಲ್ಲಿ ಆಲೋಚಿಸಿದ ಬಗೆ ಯಾವುದು ?
6) 'ಒತ್ತುವವು ಕಡಲುಗಳು' ಪ್ರಬಂಧದಲ್ಲಿ ಬೆಂಗಳೂರಿನ ಚಳಿಯ ವರ್ಣನೆ ಹೇಗೆ ಮೂಡಿ ಬಂದಿದೆ ?
7) ಗೋಪಾಲಯ್ಯ ಶಂಕರಿಯನ್ನು ಮದುವೆಯಾದ ಪ್ರಸಂಗವನ್ನು ವಿವರಿಸಿ.
8) ನಾರಾಯಣ ವ್ಯಕ್ತಿತ್ವವನ್ನು ಚಿತ್ರಿಸಿ.

V. ಎಲ್ಲಾ ಪ್ರಶ್ನೆಗಳಿಗೂ ವಿಮರ್ಶಾತ್ಮಕವಾಗಿ ಉತ್ತರಿಸಿ. **(4×10=40)**

1) 'ಸುಗ್ಗಿ ಬರುತಿದೆ' ಕವನದಲ್ಲಿ ಪ್ರಕೃತಿ ಚಿತ್ರಣದೊಂದಿಗೆ ಸಾಕ್ಷಾತ್ಕಾರವಾಗುವ ದರ್ಶನ ಯಾವುದು ?

**ಅಥವಾ**

'ಇವನ ಹುಟ್ಟಿದ ಹಬ್ಬ' ಹೇಗೆ ಪ್ರತಿಯೊಬ್ಬ ಸಾಧಾರಣ ಮನುಷ್ಯನ ಹುಟ್ಟಿದ ಹಬ್ಬವೂ ಆಗಿದೆ ಸ್ಪಷ್ಟಪಡಿಸಿ.

2) ಓತಿಕ್ಯಾತನಿಂದ ಪ್ಯಾರ ಅನುಭವಿಸಿದ ಫಜೀತಿಯನ್ನು ವಿವರಿಸಿ.

**ಅಥವಾ**

ಮುಕ್ತ ಸ್ವಾತಂತ್ರ್ಯವನ್ನು ನೀಡುವ ಲೇಖಕಿಯ ಏಕಾಂತ ಸುಖದ ವಿವರಣೆ ನೀಡಿ.

3) ಜನಾಂಗ ಭೇದದ ಬಗ್ಗೆ ಲೇಖಕರ ಅಭಿಪ್ರಾಯವನ್ನು ಸಂಗ್ರಹಿಸಿ.

**ಅಥವಾ**

ವರದಕ್ಷಿಣೆಗೆ ಹೆಣ್ಣು ಮಕ್ಕಳು ಮತ್ತು ಅವರ ತಂದೆ ತಾಯಿಗಳು ಹೇಗೆ ಕಾರಣವಾಗುತ್ತಾರೆ ? ವಿವರಿಸಿ.

4) ಪ್ರಕೃತಿಯ ವಿರುದ್ಧ ಮನುಷ್ಯನ ನಿರಂತರ ಹೋರಾಟ 'ಬೆಟ್ಟದ ಜೀವ' ಕಾದಂಬರಿಯಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿ.

**ಅಥವಾ**

ದೇರಣ್ಣ, ನಾರಾಯಣ, ಲಕ್ಷ್ಮಿ – ಇವರಲ್ಲಿ ಇಬ್ಬರ ಪಾತ್ರಗಳ ಪರಿಚಯ ಮಾಡಿಕೊಡಿ.

www.onlinebu.com

http://www.onlinebu.com http://www.onlinebu.com

http://www.onlinebu.com



# II Semester B.A./B.H.M. Examination, May 2011
## (Repeaters Scheme)
## ಕನ್ನಡ ಭಾಷೆ – 2
## ಸಾಹಿತ್ಯ ಸಂವಾದ – 1

Time : 3 Hours　　　　Max. Marks : 90

### ಭಾಗ – 1

I. 1) ಐದು ಪದಗಳಿಗೆ ಅರ್ಥ ಬರೆಯಿರಿ : **(1×5=5)**

ತನೂಭವ, ಕಡಗಿ, ಸುಲಿಪಲ್ಲು, ಪ್ರಕೃತಿ, ಫಣ್ಣಿದ, ಸಂಗ್ರಾಮ, ಹೆಗಲು

2) ಐದು ಪದಗಳಿಗೆ ನಾನಾರ್ಥ ಬರೆಯಿರಿ : **(1×5=5)**

ಕಾಡು, ಅರಸು, ಕಲಿ, ಮಡಿ, ಅಂಬು, ಅಂಬರ, ಜರೆ.

3) ಐದು ಪದಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ. **(1×5=5)**

ಸಂಘರ್ಷ, ಸಿಂಹಾಸನ, ನವೀನ, ಬಿಡುಗಡೆ, ಆತಂಕ, ಮನೋರಂಜನೆ, ಧೀರೋದಾತ್ತ

4) ಐದು ಪದಗಳಿಗೆ ಗ್ರಾಂಥಿಕ ರೂಪವನ್ನು ಬರೆಯಿರಿ : **(1×5=5)**

ಮನ್ಸ, ಕುಂಡ್ರು, ದ್ಯಾವರು, ಇಸ್ಕೂಲು, ಜಲ್ಮ, ಕ್ವಾಟಿ, ಬ್ಯಾದರಾವೋ.

5) ನಾಲ್ಕು ಅನುಕರಣ ಪದಗಳನ್ನು ಬರೆಯಿರಿ. **(1×4=4)**

6) ಎರಡು ಗಾದೆಗಳನ್ನು ವಿಸ್ತರಿಸಿ ಬರೆಯಿರಿ : **(2×3=6)**

1) ಮೂಗಿಗಿಂತ ಮೂಗುತಿ ಭಾರ

2) ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು

3) ಬೆಂಕಿ ಬಿದ್ದಾಗ ಬಾವಿ ತೋಡಿದಂತೆ.

### ಭಾಗ – 2

II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(4×5=20)**

1) 'ಶ್ಮಶಾನ ಕುರುಕ್ಷೇತ್ರಂ' ನಾಟಕದ ಮುದುಕಿ ಮತ್ತು ಮಾತೆಯ ಸಂಭಾಷಣೆ ಸ್ವಾರಸ್ಯ.

2) ದುರ್ಯೋಧನನು ದ್ರೋಣನ ಕಳೇಬರವನ್ನು ನೋಡಿ ಪ್ರಲಾಪಿಸಿದ ಬಗೆ ಹೇಗೆ ?

3) ಚರಿತ್ರೆ ಪ್ರಶ್ನೆ ಪತ್ರಿಕೆಯಲ್ಲಿ ವ್ಯಕ್ತವಾಗುವ ಚರಿತ್ರೆ ಮತ್ತು ಕ್ರೌರ್ಯ.

4) ಸಾಧುವಿನ ಪ್ರಾಪಂಚಿಕ ವ್ಯಾಮೋಹಗಳು ಅಂಟಿಕೊಳ್ಳಲು ಕಾರಣಗಳೇನು ?

5) ಡಾ॥ ಜಿ. ಎಸ್. ಶಿವರುದ್ರಪ್ಪನವರ 'ಗಡಿಯಾರದಡಿಯಲ್ಲಿ' ನ ಕವಿತೆಯ ಆಶಯ.

6) ಕಾನೂರು ಸುಬ್ಬಮ್ಮ ಹೆಗ್ಗಡತಿ ಕನಸು.

http://www.onlinebu.com



## ಭಾಗ – 3

III. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ. **(2×10=20)**

1) ದುರ್ಯೋಧನ ರಣಭೂಮಿಯಲ್ಲಿ ಬಂಧು-ಬಾಂಧವರ ಕಳೇಬರಗಳನ್ನು ಕಂಡು ಪ್ರಲಾಪಿಸಿದ ಬಗೆಯನ್ನು ವಿವರಿಸಿ.
2) 'ಏಳು ಕನ್ನಿಕೆಯರು' – ಕವಿತೆಯ ಸ್ವಾರಸ್ಯವನ್ನು ವಿವರಿಸಿ.
3) 'ಆಧುನಿಕ ಮನುಷ್ಯ ಚರಿತ್ರೆಹೀನ' ? – ಈ ಹೇಳಿಕೆಯನ್ನು ಚರಿತ್ರೆಯ ಪ್ರಶ್ನೆಪತ್ರಿಕೆಯ ಕವಿತೆಯ ಹಿನ್ನಲೆಯಲ್ಲಿ ವಿವೇಚಿಸಿ.
4) ಲೇಖಕರು ವಿಮಾನ ಪ್ರಯಾಣದಲ್ಲಿ ಗಗನ ಸಖಿಯ ಮೇಲೆ ಕೋಪಗೊಳ್ಳಲು ಕಾರಣವೇನು ? ವಿವರಿಸಿ.

## ಭಾಗ – 4

IV. ಎರಡು ಪ್ರಶ್ನೆಗಳಿಗೆ ಸ್ವಂತ ಆಲೋಚನೆ/ ವಿಮರ್ಶಾತ್ಮಕವಾಗಿ ಉತ್ತರ ಬರೆಯಿರಿ : **(2×10=20)**

1) ರಾವಣನ ಕನಸಿನಲ್ಲಿ ಕಂಡ ಭವಿಷ್ಯ ಸೂಚನೆ ಯಾವುದು ? ವಿವೇಚಿಸಿ.
2) ಚಂದ್ರಗುಪ್ತನ ನಾಶಕ್ಕೆ ಅಮಾತ್ಯ ರಾಕ್ಷಸನು ಹೂಡಿದ ತಂತ್ರಗಳಾವುವು ? ಚರ್ಚಿಸಿ.
3) ಎಲ್ಲವೂ ಸರಕಾಗಿ ಪರಿವರ್ತಿತವಾಗುವುದು ಆಧುನಿಕ ಸಮಾಜದ ಲಕ್ಷಣ– ಈ ಹಿನ್ನೆಲೆಯಲ್ಲಿ ಮೂಗು ಪಡೆದುಕೊಳ್ಳುವ ವ್ಯಾವಹಾರಿಕ ನೆಲೆಗಳನ್ನು ವಿವರಿಸಿ.
4) ಸನತ್‌ಕುಮಾರನು ಇಂದ್ರನಾಗಿ ಜನಿಸಿದ ಬಗೆ ಹೇಗೆ ವಿಶದಪಡಿಸಿ.

---

http://www.onlinebu.com http://www.onlinebu.com